

ಏರು ದಾರಿಯಲ್ಲಿ ದಣಿವು ತಣಿಸುವಂತೆ ಕಾಣಿಸುವ ಮಂಟಪ

## ಗಿರಿಗದ್ದೆ ಮನೆ, ಚೆಕ್ ಪೋಸ್ಟ್

ಕಾಡು ಮತ್ತು ಪರ್ವತದ ಮಧ್ಯದಲ್ಲಿರುವ ಒಂಟಿ ಮನೆಯೇ 'ಗಿರಿಗದ್ದೆ'. ಈಗ ಮನೆಯಲ್ಲಿ ಮಹಲಿಂಗೇಶ್ವರ ಭಟ್ ಮತ್ತು ಅವರ ತಮ್ಮ ನಾರಾಯಣ ಭಟ್ ಚಾರಣಿಗರಿಗೆ ಊಟ ಮತ್ತು ಟೆಂಟ್ ವ್ಯವಸ್ಥೆ ಕಲ್ಪಿಸುತ್ತಾರೆ. ಇಲ್ಲಿಯೇ ಅರಣ್ಯ ಇಲಾಖೆಯವರಿಂದಲೂ ಚಾರಣಿಗರಿಗೆ ತಂಗಲಿಕ್ಕೆ ಟೆಂಟ್ ವ್ಯವಸ್ಥೆ ಇದೆ. ಪ್ಲಾಸ್ಟಿಕ್ ಬಳಕೆಗೆ ಕಡ್ಡಾಯ ನಿಷೇಧವಿದೆ. ನೀವು ತೆಗೆದುಕೊಂಡು ಹೋಗುವ ಪ್ರತಿ ಪ್ಲಾಸ್ಟಿಕನ್ನು ಲೆಕ್ಕ ಹಾಕಿಯೇ ಕಳಿಸುತ್ತಾರೆ. ಅಷ್ಟೇ ಸಂಖ್ಯೆಯ ಪ್ಲಾಸ್ಟಿಕ್ ಲೆಕ್ಕವನ್ನು ಬರುವಾಗ ನೀಡಿದರೆ ನಿಮ್ಮಿಂದ ಕಟ್ಟಿಸಿಕೊಂಡಿರುವ ಡಿಪಾಸಿಟ್ ಹಣ ವಾಪಸ್ ಕೊಡುತ್ತಾರೆ. ಚಾರಣಿಗರು ಇದನ್ನು ಪಾಲಿಸಬೇಕಾಗುತ್ತದೆ.

ಸಾಧ್ಯವೇ?' ಎಂದು ಆಶ್ಚರ್ಯದಿಂದ ಕೇಳಿದರು. ಆ ಯುವತಿಯೊಂದಿಗೆ ಬರುತ್ತಿದ್ದ ಯುವಕ 'ಆಕೆಗೆ ಶೂ ಒತ್ತಿ ಎರಡೂ ಕಾಲುಗಳ ಹಿಮ್ಮಡಿಗಳಲ್ಲಿ ಗಾಯ ಆಗಿದೆ. ಅದಕ್ಕೇ ಹವಾಯಿ ಚಪ್ಪಲಿ ಹಾಕಿಕೊಂಡಿದ್ದಾಳೆ ಸರ್' ಎಂದು ಹೇಳಿದ. ಹಿಮ್ಮಡಿಗಾದ ಗಾಯಕ್ಕೆ ಬ್ಯಾಂಡೇಜ್ ಹಾಕಿ ಹೆಜ್ಜೆ ಇಡುತ್ತಿದ್ದವಳಿಗೆ, 'ತುಂಬಾ ಕಷ್ಟ ಆಯ್ತಲ್ಲಮ್ಮ ನಡೆಯೋದು' ಎಂದಾಗ ಆ ಯುವತಿ ಕೊಂಚವೂ ತಡವರಿಸದೆ, 'ಅಯ್ಯೋ, ಹೆರಿಗೆ ನೋವಿನ ಮುಂದೆ ಇದ್ಯಾವ ಲೆಕ್ಕ ಬಿಡಿ ಸರ್' ಎಂದು ನಿರಾಯಾಸವಾಗಿ ಹೇಳಿದಳು. ಕಡಿದಾದ ಬೆಟ್ಟ ಇಳಿಯಲು ಬೆವರು ಹರಿಸುತ್ತಿದ್ದ ನಮ್ಮನ್ನು ನಾಚಿಕೊಳ್ಳುವಂತೆ ಮಾಡಿ ನಮ್ಮ ಹೆಜ್ಜೆ ಬಿರುಸಾಗುವಂತೆ ಮಾಡಿದಳು. ಅವಳ ಹೆಣ್ಣಿನ ಅನುಭವದ ಮಾತು ಒಂದು ರೂಪಕದಂತೆ ನಮ್ಮನ್ನೆಲ್ಲಾ ಕ್ಷಣಕಾಲ ಆವರಿಸಿಕೊಂಡಿತು.

### ಎಲ್ಲ ಎಲ್ಲೆಗಳ ದಾಟಿ...

ಪರ್ವತ ಏರುತ್ತಾ ಏರುತ್ತಾ ಸಾಗಿದಂತೆ ಲೌಕಿಕ ಜಗತ್ತಿನಿಂದ ದೂರ ಸರಿದಂತೆ ಭಾಸವಾಗತೊಡಗಿತು. ನನ್ನೊಳಗೆ ಮಾತೇ ಇಲ್ಲವಾಗಿತ್ತು. ನನ್ನೊಳಗೇ ಒಮ್ಮೆ ನೋಡಿಕೊಳ್ಳುತ್ತಾ ನಡೆಯುತ್ತಿದ್ದೆ. ಆ ಅಗಾಧ ಪರ್ವತಶ್ರೇಣಿಯ ನಡುವೆ ನಮ್ಮವರೆನ್ನುವವರು ಯಾರೂ ಇಲ್ಲವಾಗಿ, ಎಲ್ಲವನ್ನೂ ಕಳೆದುಕೊಂಡಂತವರಾಗಿ, ದೇಶ–ಕಾಲ, ಜಾತಿ, ಧರ್ಮ, ಭಾಷೆಗಳನ್ನೂ ಮೀರಿ ಅಲ್ಲಿರುವವರದೇ ಒಂದು 'ದಾರಿಹೋಕರ ಪಂಥ'ವಾಗಿಬಿಡುವುದನ್ನು ನಾನು ಕಂಡೆ. ನಾನು ಮತ್ತು ನನ್ನ ಜೊತೆಗಾರರು ಆ ಪರ್ವತವನ್ನು ಏದುಸಿರು ಬಿಡುತ್ತಾ ಇನ್ನೇನು ಕೆಲವೇ ಹೆಜ್ಜೆಗಳಲ್ಲಿ ಗುರಿಯೆಡೆಗೆ ತಲುಪುವ ಆ ದಿವ್ಯ ಕ್ಷಣ ಎದುರಾಗುತ್ತಿತ್ತು. ಅಷ್ಟು ಹೊತ್ತಿಗಾಗಲೇ ಮುನ್ನಾ ಮತ್ತು ಅವನ ಪುಟ್ಟ ಕುಟುಂಬ ಗುರಿ ತಲುಪಿ ಹಿಂದಿರುಗುತ್ತಿತ್ತು. ಮುನ್ನಾ ತಲೆಮೇಲೆ ಬಿಳಿ ವಸ್ತ್ರ ಹಾಕಿಕೊಂಡು ಬರುತ್ತಿದ್ದ ಆ ಕ್ಷಣದ ನೋಟ ಅಪೂರ್ವವಾಗಿತ್ತು. ನಿತ್ರಾಣಗೊಂಡ ಅವರ ದೇಹದಲ್ಲಿ ಸೋತ ಕಾಲುಗಳು ಪ್ರಜ್ಞೆ ಕಳೆದುಕೊಂಡು ಮನಸ್ಸಿನಿಚ್ಛೆಗೆ ವಿರುದ್ಧವಾಗಿ ಹೆಜ್ಜೆ ಇಡುತ್ತಿದ್ದವು. ಅವನಾದರೋ ತನಗಂಟಿದ್ದ ಲೋಕದ ಜಂಜಡ, ಜಗದ ಕೊಳೆ ಕಳೆದುಕೊಂಡು ಬಂದಂತೆ ನನ್ನ ಕಣ್ಣಿಗೆ ಕಂಡ. ನಾನು ಈಗ ಆ ಕೊಳೆಯನ್ನು ಕಳೆದುಕೊಳ್ಳುವ ದಿಕ್ಕಿನೆಡೆಗೆ ಸಾಗುತ್ತಿದ್ದೆ. ಈ ಎಲ್ಲವನ್ನೂ ನೆನೆದು ಒಂದು ಕ್ಷಣ ಮನಸ್ಸು ವಿಚಲಿತವಾಗಿ ಅಲ್ಲಿದ್ದ ಕಲ್ಲಿನ ಮೇಲೆ ಕುಳಿತು ನಿಟ್ಟುಸಿರು ಬಿಟ್ಟೆ. ಈ ಕಾಲಘಟ್ಟದಲ್ಲಿ ಮನುಷ್ಯ ಸಂಬಂಧಗಳು ಲೆಕ್ಕದ ಸೂತ್ರಗಳಂತಾಗಿವೆ. ಯಾಂತ್ರಿಕವಾಗಿರುವ ಈ ಸಮಾಜದ ನಡುವೆ ಮನುಷ್ಯ ಕಂಡುಕೊಳ್ಳಬೇಕಾದ ಶಾಂತಿ ಮತ್ತು ನೆಮ್ಮದಿಗಳನ್ನು ಹೊಳೆಯ ದಡದಲ್ಲಿ, ಕಡಲ ತಡಿಯಲ್ಲಿ ಅಥವಾ ಪ್ರಕೃತಿಯ ಸನ್ನಿಧಿಯಲ್ಲಿ ಕಂಡುಕೊಳ್ಳಬಹುದು ಎನಿಸಿತು.

ಕುಮಾರ ಪರ್ವತದ ಚಾರಣ ನಡಿಗೆಯ ಅಪೂರ್ವ ಸುಖವನ್ನು ನೀಡುತ್ತದೆ. ಇದು ನಡೆದೇ ಅರಿಯಬೇಕಾದ ಅದ್ಭುತ ಅನುಭವ. ಚಾರಣದ ಸಮಯ ನಮ್ಮ ದೈಹಿಕ ಸಾಮರ್ಥ್ಯವನ್ನು ಒರೆಗೆ ಹಚ್ಚುತ್ತದೆ. ದೇಹದ ಕಸುವೆಲ್ಲ ಸೋರಿಹೋದಂತನ್ನಿಸಿದ ಸಂದರ್ಭದಲ್ಲೇ, ಪ್ರಕೃತಿಯ ಸೌಂದರ್ಯ ಕಣ್ಮನಗಳನ್ನು ತುಂಬಿ ಹೊಸ ಚೈತನ್ಯ ನೀಡುತ್ತದೆ.

ಇದೆಲ್ಲಕ್ಕೂ ಮಿಗಿಲಾಗಿ, ಪ್ರಕೃತಿಯ ಅಗಾಧ ಶಕ್ತಿಯನ್ನು ಅರಿಯಲಿಕ್ಕೆ ಈ ಚಾರಣ ಜೀವಂತ ಪಠ್ಯದಂತೆ ನೆರವಾಗುತ್ತದೆ. ನಡಿಗೆಯ ಹಾದಿ ಚಾರಣಿಗನಿಗೆ ಬದುಕಿನ ಸಾರ್ಥಕತೆಯನ್ನು ತಿಳಿವಿಗೆ ತರುವ ಹಾಗೂ ಪ್ರಕೃತಿಯನ್ನು ಅರಿಯುವ ಸತ್ಯ ಸಾಕ್ಷಾತ್ಕಾರದ ದಾರಿಯಂತೆ ಭಾಸವಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in